# ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ..ದಂ.ಕಾರಿಯವರ ನ್ಯಾಯಾಲಯ, ಮಡಿಕೇರಿ, ಕೊಡಗು.

## ಒ.ಎಸ್.ನಂಃ 1/2022

ಪಿಡಬ್ಲ್ಯುಃ -1

ದಿನಾಂಕಃ21.09.2024 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ. ಕೆ ಎಂ ಕೆ ವಕೀಲರಿಂದಃ-

26. ನಾನು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವ ಭಾವಚಿತ್ರಗಳನ್ನು ಈ ಪ್ರಕರಣ ದಾಖಲಾದ ನಂತರ ನಾನೇ ತೆಗೆದಿರುತ್ತೇನೆ. ಸದರಿ ಭಾವಚಿತ್ರಗಳನ್ನು ನಾನು ನನ್ನ ವೈಯಕ್ತಿಕ ಮೊಬೈಲ್‌ನಲ್ಲಿ ತೆಗೆದಿರುತ್ತೇವೆ. ಸದರಿ ಭಾವಚಿತ್ರಗಳನ್ನು ನಾನು ಮಡಿಕೇರಿಯ ಜನರಲ್ ತಿಮ್ಮಯ್ಯ ಅವರ ಸರ್ಕಲ್‌ನ ಬಳಿ ಇರುವ ಒಂದು ಸ್ಟುಡಿಯೋದಲ್ಲಿ ಪ್ರಿಂಟ್ ಹಾಕಿಸಿರುತ್ತೇನೆ. ಭಾವಚಿತ್ರಗಳನ್ನು ಸಂಬಂಧಿಸಿದ ಸಿ ಡಿ ಯನ್ನಾಗಲಿ, ನೆಗೆಟಿವನ್ನಾಗಲಿ, ಪ್ರಮಾಣ ಪತ್ರವನ್ನಾಗಲಿ ಹಾಜರು ಪಡಿಸಿಲ್ಲ ಎಂದರೆ ಸರಿ. ನಿಪಿ-3 ರಿಂದ 16 ರವರೆಗಿನ ಭಾವಚಿತ್ರಗಳನ್ನು ನೋಡಿದರೆ ಅವುಗಳನ್ನು ಎಲ್ಲಿ ತೆಗೆಯಲಾಗಿದೆ ಎಂದು ತಿಳಿಯುವುದಿಲ್ಲ ಎಂದರೆ ನನಗೆ ಗೊತ್ತಾಗುತ್ತದೆ. ನಾನು ನನಗೆ ಅನುಕೂಲವಾಗುವಂತೆ ಭಾವಚಿತ್ರಗಳನ್ನುತೆಗೆದು ನ್ಯಾಯಾಲಯಕ್ಕೆ ನೀಡಿದ್ದೇನೆ ಎಂದರೆ ಸರಿಯಲ್ಲ.ಸಾಕ್ಷಿ ಮುಂದುವರೆದು ಸ್ಥಳದಲ್ಲಿ ಯಾವ ರೀತಿ ಇದೆ ಎಂದು ಭಾವಚಿತ್ರ ತೆಗೆದು ನ್ಯಾಯಾಲಯಕ್ಕೆ ನೀಡಿದ್ದೇನೆ.

27. ನಿಪಿ-2 ನಕಾಶೆಯನ್ನು 1993 ರಲ್ಲಿ ತಯಾರಿಸಲಾಗಿದೆ. ಸದರಿ ನಕಾಶೆಯನ್ನು ನಮ್ಮ ಕುಟುಂಬದ ವಿಭಾಗದ ಪತ್ರ ತಯಾರಿಸುವಾಗ ಮಾಡಲಾಗಿದೆ. ಸದರಿ ನಕಾಶೆ ತಯಾರಿಸುವಾಗ ಕೆ. ಎ. ಅಪ್ಪಯ್ಯ ಮತ್ತು ಕೆ ಎ ಲಿಂಗರಾಜು ಅವರು ಹಾಗೂ ಸರ್ವೆಯರ್ ರವರು ಇದ್ದರು. ನಾನು ಆ ಸಮಯದಲ್ಲಿ ಮೈಸೂರಿನಲ್ಲಿ ಇದ್ದೆ. ನಿಪಿ-2 ನಕಾಶೆಯನ್ನು 1993 ರಲ್ಲಿ ಆದ ವಿಭಾಗ ಪತ್ರಕ್ಕೆ ಜೋಡಿಸಿದ್ದಾರೆ. 1993 ರಲ್ಲಿ ಆದ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ನೀಡಿದ್ದೀರಾ ಎಂದರೆ ಸಾಕ್ಷಿ 1993 ರಲ್ಲಿ ಆದ ವಿಭಾಗ

ಪತ್ರವನ್ನು 2000 ನೇ ಇಸವಿಯಲ್ಲಿ ನೋಂದಣಿ ಮಾಡಲಾಗಿದೆ ಹಾಗೂ ಸದರಿ ನೋಂದಣಿಯಾದ ವಿಭಾಗದ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. 2000 ನೇ ಇಸವಿಯ ವಿಭಾಗ ಪತ್ರಕ್ಕೆ ನಿಪಿ-2 ನಕಾಶೆ ಜೋಡಣೆಯಾಗಿದೆಯಾ ಎಂದರೆ ಜೋಡಣೆಯಾಗಿಲ್ಲ ಪ್ರತ್ಯೇಕವಾಗಿ ಇಡಲಾಗಿದೆ ಎಂದು ನುಡಿಯುತ್ತಾರೆ. 1993 ರಲ್ಲಿ ಆದ ವಿಭಾಗ ಪತ್ರವನ್ನು ನೋಂದಣಿ ಮಾಡಲಾಗಿದೆಯಾ ಎಂದರೆ ಅದೇ ವಿಭಾಗ ಪತ್ರವನ್ನೇ 2000 ನೇ ಇಸವಿಯಲ್ಲಿ ನೋಂದಣಿ ಮಾಡಿದ್ದೇವೆ ಎಂದು ನುಡಿಯುತ್ತಾರೆ. ನಿಪಿ-2 ನಕಾಶೆಯಲ್ಲಿ ಸರ್ವೆಯರ್ ರವರು ದಿಃ 25.10.1992 ರಲ್ಲಿ ಸಹಿ ಮಾಡಿದ ರೀತಿ ಕಾಣುತ್ತದೆ ಎಂದರೆ ಸಾಕ್ಷಿ ವಿಭಾಗ ಪತ್ರ ನೋಂದಣಿ ಮಾಡುವ ಮೊದಲು ನಕಾಶೆಯನ್ನು ತಯಾರಿಸಲಾಗಿದೆ ಎಂದು ನುಡಿಯುತ್ತಾರೆ.

28. ನಾನು ದಾವಾ ಅನುಸೂಚಿಯಲ್ಲಿ ತೋರಿಸಿರುವ ರಸ್ತೆ ಯಾವೆಲ್ಲಾ ಸರ್ವೆ ನಂಬರುಗಳನ್ನು ಹಾದು ಹೋಗುತ್ತದೆ ಎಂದು ನಾನು ನಿಖರವಾಗಿ ಸೂಚಿಸಿಲ್ಲ ಎಂದರೆ ಸಾಕ್ಷಿ ಸರಿ ಎಂದು ಉತ್ತರಿಸಿ, ಸದರಿ ದಾರಿಯು ಯಾರೆಲ್ಲಾ ಜಾಗದಲ್ಲಿ ಹೋಗುತ್ತದೆ ಎಂದು ಅವರ ಹೆಸರನ್ನು ಸೂಚಿಸಿದ್ದೇನೆ ಎಂದು ನುಡಿಯುತ್ತಾರೆ. ರಸ್ತೆಯ ಮೊದಲಿಗೆ ಮಜ್ಜಿಗೆಯವರ ಕುಟುಂಬಕ್ಕೆ ಸೇರಿದ ಆಸ್ತಿಯಲ್ಲಿ, ಆನಂತರ ದೇವರಕಾಡಿನಲ್ಲಿ, ಅದಾದ ನಂತರ ಕೊಂಗಂಡ ಕುಟುಂಬಕ್ಕೆ ಸೇರಿದ ಜಾಗದಲ್ಲಿ ಹಾದು ಸರ್ವೆ ನಂಬರ್ 121 ರ ಕುಂಚೆಟ್ಟಿರ ಪೊನ್ನಪ್ಪ ಅವರಿಗೆ ಸೇರಿದ ಜಾಗದಲ್ಲಿ ಹಾದು ಹೋಗುತ್ತದೆ. ಮಜ್ಜಿಗೆ ಕುಟುಂಬದವರನ್ನು ಮತ್ತು ಕೊಂಗಂಡ ಕುಟುಂಬದವರನ್ನು ಈ ದಾವಾದಲ್ಲಿ ಪಕ್ಷಗಾರರನ್ನಾಗಲಿ ಸೇರಿಸಿಲ್ಲ ಎಂದರೆ ಸರಿ. ಅದೇ ರೀತಿ ಕುಂಚೆಟ್ಟಿರ ಪೊನ್ನಪ್ಪ ಅವರನ್ನು ಸಹ ಈ ದಾವಾದಲ್ಲಿ ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ಸರಿ. ನಾನು ಈ ಮೇಲೆ ಹೇಳಿದ ವ್ಯಕ್ತಿಗಳ ಮತ್ತು ಕುಟುಂಬದವರ ಸರ್ವೆ ನಂಬರುಗಳನ್ನು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ. ನಾನು ದಾವಾದಲ್ಲಿ ರಸ್ತೆ ಹಾದು ಹೋಗುವ ಸರ್ವೆ ನಂಬರುಗಳ ಪಹಣಿ ಪತ್ರಿಕೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ.

29. ಈ ದಾವಾದ ಪ್ರತಿವಾದಿಗೆ ಸೇರಿದ ಸರ್ವೆ ನಂಬರ್ 120/4 ರಲ್ಲಿ ದಾವಾ ಅನುಸೂಚಿ ರಸ್ತೆ ಹಾದು ಹೋಗುತ್ತದೆ. ಸರ್ವೆ ನಂಬರ್ 120/4 ರಲ್ಲಿ ರಸ್ತೆ ಹೋಗುತ್ತದೆ ಎಂದು ನಾನು ಈ ದಾವಾದಲ್ಲಿ ಎಲ್ಲೂ ಹೇಳಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ವಾದ ಪತ್ರವನ್ನು ತೋರಿಸಿ, ದಾವಾ ಪತ್ರದ ಯಾವ ಭಾಗದಲ್ಲಿ ಸರ್ವೆ ನಂಬರ್ 120/4 ರ ಬಗ್ಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ವಾದ ಪತ್ರದ ಕಂಡಿಕೆ 6 ರಲ್ಲಿ ತಿಳಿಸಿದ್ದೇನೆ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ವಾದ ಪತ್ರದ ಕಂಡಿಕೆ 6 ರಲ್ಲಿ ದಾವಾ ಅನುಸೂಚಿ ರಸ್ತೆಯು ಸರ್ವೆ ನಂಬರ್ 120/4 ರಲ್ಲಿ ಹಾದು ಹೋಗುತ್ತದೆ ಎಂದು ಬರೆದಿಲ್ಲ ಎಂದರೆ ಸಾಕ್ಷಿ ಸರಿ ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು ಸರ್ವೆ ನಂಬರ್ 120/4 ರ ಪಶ್ಚಿಮ ದಿಕ್ಕಿಗೆ ರಸ್ತೆ ಹಾದು ಹೋಗುತ್ತದೆ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು.)

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಜೆಎಂಎಫ್‌ಸಿ, ಮಡಿಕೇರಿ.